ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
Karnataka Residential Educational Institutions Society
(An Organisation of Govt. of Karnataka)

ಸಂಖ್ಯೆ:ಕವಶಿಸಸ/ಆಡಳಿತ/ನೇ.ನೇ- ಹಿಂ.ಶಿ/ಸಿ.ಆರ್-04/2020-21 ದಿನಾಂಕ: 03.06.2020

## ತಿಳುವಳಿಕೆ ಪತ್ರ

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ ಹಿಂದಿ ಶಿಕ್ಷಕರ ನೇರ ನೇಮಕಾತಿಯ ಸಂಬಂಧ KPSC ಮೂಲಕ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಇತರೆ ಅವಶ್ಯ ದಾಖಲೆಗಳ ಪರಿಶೀಲನೆ ಮಾಡುವ ಬಗ್ಗೆ,

ಉಲ್ಲೇಖ 1 : ಅಧಿಸೂಚನೆ ಸಂಖ್ಯೆ: ಆರ್(2)1084/2017.18/ಪಿ.ಎಸ್.ಸಿ, ದಿನಾಂಕ:23.06.2017

2 : ಅಂತಿಮ ಆಯ್ಕೆಪಟ್ಟಿ ಅಧಿಸೂಚನೆ ಸಂಖ್ಯೆ: ಆರ್(2)712/2020-21 ಪಿ.ಎಸ್.ಸಿ ದಿನಾಂಕ: 09.06.2020.

3 : ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ:ಆರ್(2)911/2020-21 ಪಿ.ಎಸ್.ಸಿ, ದಿನಾಂಕ: 18.06.2020.

4 : ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣದ ಆದೇಶ ಸಂಖ್ಯೆ WP NO 8523/ 2020(S-RES) ದಿನಾಂಕ: 13.04.2022.

5 : ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣದ ಆದೇಶ ಸಂಖ್ಯೆ WP NO 9157/ 2021 (S-RES)

6 : ಕರ್ನಾಟಕ ಲೋಕಸೇವಾ ಆಯೋಗದ ಪತ್ರದ ದಿನಾಂಕ: 17.02.2022

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ ಹಿಂದಿ ಶಿಕ್ಷಕರ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಹಮ್ಮಿಕೊಂಡಿದ್ದು, ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ 09.06.2020 ರಂದು ಪ್ರಕಟಿಸಲಾಗಿದೆ.

ಉಲ್ಲೇಖ(4)ರ ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ 20 ಅಭ್ಯರ್ಥಿಗಳನ್ನು ಹಾಗೂ ಉಲ್ಲೇಖ(5)ರ ರನ್ವಯ್ಲು 01 ಅಭ್ಯರ್ಥಿಗಳ ಸೇರಿದಂತೆ ಒಟ್ಟು 21 ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ನಿರ್ದೇಶಿಸಿರುವಂತೆ, ಉಲ್ಲೇಖ(6)ರಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನೀಡಿರುವ ಮಾಹಿತಿ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ಅನುಬಂಧ-A ರನ್ವಯ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕಿರುವ 21 ಅಭ್ಯರ್ಥಿಗಳನ್ನು ಹೊರತುಪಡಿಸಿ, ಉಳಿದ 160 ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲಾಗಿದೆ.

ಅದರಂತೆ 160 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮೊದಲು ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ನೇಮಕಾತಿ ಮಾಡಿಕೊಳ್ಳಬೇಕಿರುತ್ತದೆ. ಆದ್ದರಿಂದ ಆಯ್ಕೆಯಾಗಿರುವ ಹಿಂದಿ ಶಿಕ್ಷಕರ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಸಂಬಂಧಪಟ್ಟ ಇತರೆ ದಾಖಲೆಗಳ ಪರೀಶೀಲನೆ ಕಾರ್ಯವನ್ನು ದಿನಾಂಕ:16.06.2022 ರಂದು ಡಾ॥ ಬಿ.ಆರ್ ಅಂಬೇಡ್ಕರ್ ಭವನ, ವಸಂತ ನಗರ, ಬೆಂಗಳೂರು ಇಲ್ಲಿ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲಾ ಮೂಲ ಅಂಕಪಟ್ಟಿಗಳು ಹಾಗೂ ಇತರೆ ಸಂಬಂಧಪಟ್ಟ ದಾಖಲೆ (ಕನ್ನಡ ಮಾಧ್ಯಮ, ಗ್ರಾಮೀಣ, ಹೈ.ಕ. ಯೋ.ನಿರಾಶ್ರಿತ, ಜಾತಿ & ಆದಾಯ ಪ್ರಮಾಣ ಪತ್ರ, ವಿಕಲಚೇತನ ಪ್ರಮಾಣ ಪತ್ರ, ಮಾ.ಸೈ) ಗಳನ್ನು ಮೂಲ ಹಾಗೂ ದೃಢೀಕೃತ ಎರಡು ನಕಲು ಪ್ರತಿಗಳೊಂದಿಗೆ ತಪ್ಪದೇ ಹಾಜರಾಗಬೇಕೆಂದು ಸೂಚಿಸಲಾಗಿದೆ.

ಮುಂದುವರೆದು ಒಂದು ವೇಳೆ ದಾಖಲಾತಿ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ನಂತರ ಬಂದಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ ಅಭ್ಯರ್ಥಿಗಳ ಪೊಷಕರು/ಸಂಬಂಧಿಗಳಿಗೆ ಪ್ರವೇಶವಿರುವುದಿಲ್ಲ. ಅಭ್ಯರ್ಥಿಗಳು ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಂಡು ದಾಖಲಾತಿ ಪರಿಶೀಲನೆಗೆ ಸಹಕರಿಸಲು ತಿಳಿಸಿದೆ.

| ಕ್ರ.ಸ | ದಿನಾಂಕ | ಬೆಳಿಗ್ಗೆ | ಕೆ.ಪಿ.ಎಸ್.ಸಿ ರ್‍ಯಾಂಕ್ ನಂ |
|---|---|---|---|
| 1 | 16.06.2022 | 10.00 ರಿಂದ 1.30 | ರ್‍ಯಾಂಕ್ 1 ರಿಂದ 80 |
| | | 1.30 ರಿಂದ 5.30 | ರ್‍ಯಾಂಕ್ 81 ರಿಂದ 158<br>ರ್‍ಯಾಂಕ್ 1 ರಿಂದ 23 (ಹೈದರಾಬಾದ ಕರ್ನಾಟಕ) |

ಕಾರ್ಯನಿರ್ವಾಹಕ ನಿರ್ದೇಶಕರು